# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5016/2025 ಫ್ರಾಸಾ-11

ಚಾಸಾ-16

ದಿನಾಂಕಃ 10-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಪದ್ಮ ಎನ್. |
| **ತಂದೆಯ / ಗಂಡನ ಹೆಸರು** | ನಾರಾಯಣರೆಡ್ಡಿ |
| **ವಯಸ್ಸು** | 54 |
| **ಉದ್ಯೋಗ** | ಪಿ.ಎಸ್.ಐ , ಚಿಕ್ಕಬಳ್ಳಾಪುರ |
| **ವಾಸಸ್ಥಳ** | ಚಿಕ್ಕಬಳ್ಳಾಪುರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

**ನಾನು 2024 ಫೆಬ್ರವರಿ ಕೊನೆ ವಾರದಿಂದ ಜುಲೈ 15 2024 ರವರೆಗೆ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ. 27.04.2024 ರಂದು ರಾತ್ರಿ 8-30 ಗಂಟೆಗೆ ಚಾಸಾ-1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವಿಕರಿಸಿ ಠಾಣಾ ಮೊ ನಂ-125/2024 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಿಪಿ-14 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಪ್ರಥಮ ವರ್ತಮಾನ ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-17 ಎಂದು, ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ದಿ. 28.04.2024 ರಂದು ಕೃತ್ಯ ನಡೆದ ಸ್ಥಳವಾದ ಮಲ್ಲೆಕಾವು ಗ್ರಾಮದ ಪಿರ್ಯಾದಿದಾರರ ಮನೆ ಮುಂದೆ ಬೇಟಿ ಕೊಟ್ಟು ಪಂಚರಾದ ಚಾಸಾ-5 ಮತ್ತು 6 ರವರಿಗೆ ನೋಟೀಸು ಜಾರಿ ಮಾಡಿ ಪಂಚನಾಮೆಗೆ ಬರಮಾಡಿಕೊಂಡು ಪ್ರತ್ಯಕ್ಷ ಸಾಕ್ಷಿದಾರಾದ ಚಾಸಾ-3 ರವರು ಹಾಜರಿದ್ದು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ಸದರಿ ಸ್ಥಳದಲ್ಲಿ ನಿಪಿ-6 ರಂತೆ ಪಂಚನಾಮೆ ಮಾಡಿ, ಪಂಚನಾಮೆ ಕಾಲಕ್ಕೆ ಬಂಡೆಯ ಮೇಲಿನ ರಕ್ತದ ಕಲೆಯನ್ನು ರಕ್ತರಹಿತ ಮತ್ತು ರಕ್ತಸಹಿತ ಹತ್ತಿಯಲ್ಲಿ ಸಂಗ್ರಹಿಸಿದ್ದು ಮತ್ತು ಚಾಸಾ-3 ರವರು ಹಾಜರುಪಡಿಸಿದ ಡ್ರಾಗನ್ ಮತ್ತು ಮಚ್ಚನ್ನು ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 8-00 ರಿಂದ 9-00 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಹಿಸಿ ಪಂಚರ ಸಹಿ ತೆಗೆದುಕೊಂಡಿರುತ್ತೇನೆ. ಪಂಚನಾಮೆ ಕಾಲಕ್ಕೆ ನಿಪಿ-8 ರಿಂದ 10 ರಂತೆ ಪೊಟೋ ತೆಗೆಸಿರುತ್ತದೆ. ನಿಪಿ-6 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ನಿಪಿ-8 ರಿಂದ 10 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ಡ್ರಾಗನ್ ಮತ್ತು ಮಚ್ಚನ್ನು ನೋಡಿ ಗುರುತಿಸಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ ರಕ್ತದ ಮಾದರಿ ಇರುವ ಕವರ್ ಮತ್ತು ಸಾದಾ ಹತ್ತಿ ಕವರ್ ಮತ್ತು ಬಂಡೆ ಮೇಲೆ ಸಂಗ್ರಹಿಸಿದ ರಕ್ತಸಹಿತ ಹತ್ತಿ ಇರುವ ಕವರ್ , ಮತ್ತು ಸದಾಹತ್ತಿ ಇರುವ ಕವರ್ ಗಳನ್ನು ಮತ್ತು ರಕ್ತಮಿಶ್ರಿತ ಮಣ್ಣು ಮತ್ತು ಸದಾ ಮಣ್ಣು ಇರುವ ಎರಡು ಡಬ್ಬಗಳು ಸೀಲ್ಡ್ ಬಿಳಿ ಚೀಲಗಳಲ್ಲಿ ಇದುದ ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆಗದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ-3 ರಿಂದ 8 ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 86/2024 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯದ ಪರವಾನಿಗೆ ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತರ ಪತ್ತೆ ಬಗ್ಗೆ ಚಾಸಾ-13 ಮತ್ತು 14 ರವನ್ನು ನೇಮಕ ಮಾಡಿರುತ್ತೇನೆ. ಚಾಸಾ-13 ಮತ್ತು 14 ರವರು ಆರೋಪಿಯನ್ನು ಮಲ್ಲೇಕಾವು ಗ್ರಾಮದ ಆರೋಪಿ ರಾಮಚಂದ್ರಯ್ಯನ ಜಮೀನಿನಲ್ಲಿರುವ ಶೆಡ್ ನಲ್ಲಿ ಆರೋಪಿಯನ್ನು ನನ್ನ ಮುಂದೆ 10-45 ಗಂಟೆಗೆ ಚಾಸಾ-13 ರವರು ಹಾಜರುಪಡಿಸಿ ವರದಿ ಕೊಟ್ಟಿರುತ್ತಾರೆ. ನ್ಯಾಯಾಲಯದಲ್ಲಿರುವ ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ

ಅದನ್ನು ಗುರುತಿಸುತ್ತೇನೆ. ಸದರಿ ವರದಿಯನ್ನು ನಿಪಿ-18 ಎಂದು, ಸಾಕ್ಷಿ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ ರಿಮ್ಯಾಂಡ್ ಅರ್ಜಿಯೊಂದಿಗೆ ಹಾಜರುಪಡಿಸಿರುತ್ತೇನೆ.

ದಿ. 29.04.2024 ರಂದು ಬೆಳಿಗ್ಗೆ 10-30 ಗಂಟೆಗೆ ಚಾಸಾ-3 ರವರು ಗಾಯಾಳುವಿನ ಬನಿಯನ್ ತಂದು ಹಾಜರುಪಡಿಸಿದ್ದು, ಚಾಸಾ-7 ಮತ್ತು 8 ರವರಿಗೆ ನೋಟೀಸು ಕೊಟ್ಟು ಹಾಜರುಪಡಿಸಿಕೊಂಡು ಠಾಣೆಯಲ್ಲಿ ಬೆಳಿಗ್ಗೆ 10-30 ರಿಂದ 11-15 ಗಂಟೆಯವರೆಗೆ ನಿಪಿ-7 ರಂತೆ ಅಮಾನತ್ತು ಪಂಚನಾಮೆ ಮಾಡಿ ಬನಿಯನ್ ನ್ನು ಅಮಾನತ್ತುಪಡಿಸಿಕೊಂಡು ಪಂಚರ ಸಹಿ ಪಡೆದುಕೊಂಡಿರುತ್ತೇನೆ. ನಿಪಿ-7 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-7(ಡಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ನಿಪಿ-11 ರಂತೆ ಪೊಟೋ ತೆಗೆದಿರುತ್ತದೆ. ನ್ಯಾಯಾಲಯದ ಮುಂದೆ ಇರುವ ನಿಪಿ-11 ಪೊಟೋ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯ ಪ್ಯಾಕ್ ಹಾಜರುಮಾಡಿದ್ದು ಅದರ ಮೇಲೆ ಸೀಲ್ ಸುಸ್ಥಿತಿಯಲ್ಲಿರುತ್ತದೆ. ಸದರಿ ಬಿಳಿ ಬಟ್ಟೆಯ ಸೀಲ್ ಆಗಿರುವ ಪ್ಯಾಕನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ಬನಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ-9 ಎಂದು ಗುರುತಿಸಲಾಯಿತು. ಸದರಿ ವಸ್ತುವನ್ನು ಮಾಲು ಪಟ್ಟಿ ಸಂಖ್ಯೆ87/2024 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯದ ಪರವಾನಿಗೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-3 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-3 ಮತ್ತು 4 ರವರು ನನ್ನ ಮುಂದೆ ನಿಪಿ-12 ಮತ್ತು 15 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ನಿಪಿ-12 ಮತ್ತು 15 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-12(ಎ) ಮತ್ತು ನಿಪಿ-15(ಎ) ಎಂದು ಗುರುತಿಸಲಾಯಿತು.

ದಿ. 07.05.2024 ರಂದು ಗಾಯಾಳುವಿನ ರಕ್ತದ ಗುಂಪನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ನಿಪಿ-13 ರ ರಕ್ತದ ಗುಂಪಿನ ವರದಿ ನೋಡಿ ಅದರ ಮೇಲೆ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ದಿ. 08.05.2024 ರಂದು ಚಾಸಾ-14 ರವರ ಮುಖಾಂತರ ಎಫ್.ಎಸ್.ಎಲ್. ರವರಿಗೆ ವಸ್ತುಗಳನ್ನು ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ದಿ. 09.05.2024 ರಂದು ಚಾಸಾ-14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ. 25.05.2024 ರಂದು ಗಾಯಾಳು ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ. 10.06.2024 ರಂದು ಕೃತ್ಯ ನಡೆದ ಸ್ಥಳ ನಕ್ಷೆ ತಯಾರಿಕೊಡಲು ಲೋಕೋಪಯೋಗಿ ಇಲಾಖೆರವರಿಗೆ ಮನವಿ ಸಲ್ಲಿಸಿರುತ್ತೇನೆ. ದಿ. 12.06.2024 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿಪಿ-1 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅದೇ ದಿನ ನಿಪಿ-16 ರಂತೆ ಎಫ್.ಎಲ್.ಎಂ.ಎಸ್.ವೈಬ್ ಸೈಟ್ ನಿಂದ ವರದಿಯನ್ನು ಡೌನ್ ಲೋಡ್ ಮಾಡಿಕೊಂಡು ಪ್ರಿಂಟ್ ಔಟ್ ತೆಗದುಕೊಂಡಿರುತ್ತೇನೆಜ. ನಿಪಿ-16 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಕಲಂ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರ ಕೊಟ್ಟಿರ್ತ್ತೇನೆ. ನ್ಯಾಯಾಲಯದಲ್ಲಿರುವ ಕಲಂ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-19 ಎಂದು, ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ತನಿಖಾ ಕಾಲಕ್ಕೆ ತನಿಖಾ ಸಹಾಯಕರಾದ ಚಾಸಾ-15 ರವರು ಪೊಟೋ ಮತ್ತು ವಿಡಿಯೋ ತೆಗೆದ ಬಗ್ಗೆ ಮತ್ತು ಸಾಕ್ಷಿದಾರರ ಹೇಳಿಕೆ ಸಮಯದಲ್ಲಿ ಆಡಿಯೋ ವಿಡಿಯೋ ಮಾಡಿಕೊಂಡ ಬಗ್ಗೆ 2 ಸಿ.ಡಿ. ಗಳನ್ನು ಕಲಂ 65(ಬಿ) 2 ಪ್ರಮಾಣ ಪತ್ರದೊಂದಿಗೆ ಹಾಜರುಪಡಿಸಿರುತ್ತಾರೆ. ನ್ಯಾಯಾಲಯದಲ್ಲಿರುವ ಎರಡು ಸಿ.ಡಿ ಗಳನ್ನು ಮತ್ತು ಕಲಂ 65(ಬಿ) 2 ಪ್ರಮಾಣ ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಸಿ.ಡಿ ಗಳನ್ನು ನಿಪಿ-20, ಮತ್ತು ನಿಪಿ-21 ಎಂದು , ಪ್ರಮಾಣ ಪತ್ರವನ್ನು ನಿಪಿ-22, ನಿಪಿ-23 ಎಂದು ಸಾಕ್ಷಿ ಸಹಿಯನ್ನು ನಿಪಿ-22(ಎ) ಮತ್ತು ನಿಪಿ-23(ಎ) ಎಂದು ಗುರುತಿಸಲಾಯಿತು. ದಿ.12.06.2024 ರಂದು ಚುನಾವಣೆ ಪ್ರಯುಕ್ತ ವರ್ಗಾವಣೆಯಾಗಿದ್ದರಿಂದ ತನಿಖೆಯನ್ನು ಮುಂದುವರಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಶ್ರೀ. ಡಿ.ಪಿ.ಎನ್. ವಕೀಲರಿಂದ ಆರೋಪಿ ಪರವಾಗಿಃ-</u>**

ಚಾಸಾ-1 ರವರು ಠಾಣೆಯಲ್ಲಿ ದೂರು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದೂರನ್ನು ದಾಖಲಿಸುವ ಪೂರ್ವದಲ್ಲಿ ನಾನು ಸ್ಥಳಕ್ಕೆ ಬೇಟಿ ಕೊಟ್ಟಿರುವುದಿಲ್ಲ. ನಿಪಿ-14 ದೂರನ್ನು ಯಾರು ಬರೆದಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ನಿಪಿ-14 ದೂರನ್ನು ನಮ್ಮ ಠಾಣಾ ಸಿಬ್ಬಂದಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ದಿ. 28.04.2024 ರಂದು ಕೃತ್ಯ ನಡೆದ ಸ್ಥಳಕ್ಕೆ ದ್ವಿ ಚಕ್ರ ವಾಹನದಲ್ಲಿ ಹೋಗಿರುತ್ತೇನೆ. ಸದರಿ ದ್ವಿ ಚಕ್ರ ವಾಹನದ ನೊಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಠಾಣೆಯನ್ನು ಬೆಳಿಗ್ಗೆ 7-30 ಗಂಟೆ ಬಿಟ್ಟು 7-50 ಕ್ಕೆ ತಲುಪಿರುತ್ತೇವೆ. ನಾನು ಘಟನಾ ಸ್ಥಳಕ್ಕೆ ಬೇಟಿ ಕೊಟ್ಟಿರುವುದಿಲ್ಲ ಮತ್ತು ಚಾಸಾ-3 ರವರು ಕೃತ್ಯ ನಡೆದ ಸ್ಥಳ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಇಬ್ಬರು ಪಂಚರು , ನಾನು , ಒಬ್ಬ ನಮ್ಮ ಸಿಬ್ಬಂದಿ ಮತ್ತು ಚಾಸಾ-3 ಹಾಜರಿದ್ದೇವು. ಘಟನೆ ಸ್ಥಳದಲ್ಲಿ ಸಂಗ್ರಹಿಸಿದ ರಕ್ತ ಚಾಸಾ-2 ರವರಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸ್ಥಳದಿಂದ ನಾವು ಯಾವುದೆ ರಕ್ತದ ಮಾದರಿಯನ್ನು ಸಂಗ್ರಹಿಸಿಲ್ಲ ಎಂದರೆ ಸರಿಯಲ್ಲ. ಡ್ರಾಗನ್ ಮತ್ತು ಮಚ್ಚು ಗಳು ಚಾಸಾ-3 ರವರು ಪಂಚನಾಮೆ ಕಾಲಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-3 ರವರು ನನಗೆ ಮು.ಮಾ-1 ಮತ್ತು 2 ಅಂಗಡಿಯಿಂದ ಖರೀದಿ ಮಾಡಿ ತಂದುಕೊಟ್ಟಂತಹ ಆಯುಧಗಳು ಎಂದರೆ ಸರಿಯಲ್ಲ.

ನಿಪಿ-8 ರಿಂದ 10 ಪೊಟೋಗಳನ್ನು ದಿನಾಂಕ ಸಮಯ ನಮೂದು ಇಲ್ಲ ಎಂದರೆ ನಿಜ. ನಾನು ಮುದ್ದೆ ಮಾಲುಗಳನ್ನು ಎಫ್.ಎಸ್.ಎಲ್. ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಮು.ಮಾ-9 ಬನಿಯನ್ ಚಾಸಾ-2 ರವರಿಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ಮು.ಮಾ-9 ಚಾಸಾ-9 ರವರಿಗೆ ಸೇರಿದ್ದು ಎಂದು ತೋರಿಸಲು ಖರೀದಿ ಮಾಡಿದ ಬಿಲ್ ನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ಮು.ಮಾ-1 ಮತ್ತು 2 ರ ಮೇಲೆ ರಕ್ತದ ಕಲೆಗಳು ಇಲ್ಲ ಎಂದರೆ ಸರಿಯಲ್ಲ. ಆರೋಪಿ ಪತ್ತೆಗಾಗಿ ಚಾಸಾ-13 ಮತ್ತು 14 ರವರನ್ನು ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-13 ರವರು ಆರೋಪಿತನನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ನಿಪಿ-18 ವರದಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೊಟೋ ಆಗಲೀ ವಿಡಿಯೋ ಆಗಲೀ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-3, 4, 14 ಮತ್ತು 15 ರವರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-13 ರಂತೆ ಚಾಸಾ-2 ರವರ ರಕ್ತದ ಗುಂಪಿನ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ರಕ್ತದ ಮಾದರಿಗಳನ್ನು ಎಫ್.ಎಸ್.ಎಲ್. ಗೆ ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-14 ರವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಹೇಳಿಕೆ ಮತ್ತು ಮರು ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಲೋಕೋಪಯೋಗಿ ಇಲಾಖೆಗೆ ನಕ್ಷೆ ತಯಾರಿಸಿ ಕೊಡಲು ಮನವಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಯಾವುದೇ ಗಾಯಗಳು ಆಗದೇ ಇದ್ದರೂ ವೈದ್ಯಾಧಿಕಾರಿಗಳ ಜೊತೆ ಶಾಮೀಲಾಗಿ ನಿಪಿ-1 ರಂತೆ ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎಫ್.ಎಲ್.ಎಂ. ಎಸ್. ನಿಂದ ನಿಪಿ-16 ರಂತೆ ಯಾವುದೇ ವರದಿಯನ್ನು ಡೌನ್ ಲೋಡ್ ಮಾಡಿ ಪ್ರಿಂಟ್ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ತನಿಖಾ ಸಹಾಯಕರಿಂದ ಯಾವುದೇ ಫೊಟೋಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಆಡಿಯೋ ವಿಡಿಯೋ ಮಾಡದೇ ಇದ್ದರುೂ ನಾನು ಮತ್ತು ಚಾಸಾ-15 ರವರು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲಭಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಆರೋಪಿಗೆ ಅಣ್ಣನ ಮಗ ಎನ್ನುವುದು ನಿಜ. ಚಾಸಾ-2 ಆರೋಪಿಗೆ ಸ್ವಂತ ಅಣ್ಣ ಎನ್ನುವುದು ನಿಜ. ಆರೋಪಿ ಮತ್ತು ಚಾಸಾ-1 ಮತ್ತು 2 ರವರ ಮಧ್ಯೆ ಜಮೀನಿನ ವ್ಯಾಜ್ಯ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ಸಿವಿಲ್ ವ್ಯಾಜ್ಯವನ್ನು ಬಗೆಹರಿಸಿಕೊಳ್ಳಿ ಎಂದು ಠಾಣೆಗೆ ಬಂದಾಗ ನಾನು ಸಿವಿಲ್ ಪ್ರಕರಣ ಇದ್ದರೂ ಕೂಡ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**